ಅ) ಮೈಸೂರು ತಾಲ್ಲೂಕಿನಲ್ಲಿ ಒಂದು ವರ್ಷದಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಕಳಪೆ ಗುಣಮಟ್ಟದ ಪ್ರಮಾಣಕೃತವಲ್ಲದ ಬಿತ್ತನೆ ಬೀಜ ಬಿತ್ತಲಾಗಿದೆ?

ಆ) ಇದರಿಂದ ಉಂಟಾದ ನಷ್ಟದ ಪ್ರಮಾಣವೆಷ್ಟು? ನಷ್ಟಕ್ಕೆ ನೀಡಿರುವ ಪರಿಹಾರವೆಷ್ಟು?

ಇ) ಈ ರೀತಿ ಪ್ರಮಾಣೀಕೃತವಲ್ಲದ ಬೀಜ ಮಾರಾಟ ತಪ್ಪಿಸಲು ಏನು ಕ್ರಮ ಕೈಗೊಳ್ಳಲಾಗಿದೆ?

ಈ) ಈ ದಿಸೆಯಲ್ಲಿ ಎಷ್ಟು ಮೊಕದ್ದಮ್ಮೆ ಹೂಡಲಾಗಿದೆ; ವಸೂಲು ಮಾಡಲಾದ ದಂಡದ ಪ್ರಮಾಣ ಎಷ್ಟು?

ಶ್ರೀ ಟಿ.ಬಿ.ಜಯಚಂದ್ರ (ಕೃಷಿ ಸಚಿವರು):

ಅ) ಮೈಸೂರು ತಾಲ್ಲೂಕಿನಲ್ಲಿ ಪ್ರಮಾಣೀಕರಿಸಿದ ಹಾಗೂ ಕಳಪೆ ಗುಣಮಟ್ಟದ ಬೀಜವನ್ನು ಬಿತ್ತಿರುವುದಿಲ್ಲ. ಪ್ರಮಾಣೀಕರಿಸಿದ ಬೀಜದೊಂದಿಗೆ 34,415 ಹೆಕ್ಟೇರ್ ಪ್ರದೇಶದಲ್ಲಿ ಗುರುತುಪಟ್ಟ ಹೊಂದಿದ ಮತ್ತು ರೈತರಿಂದ ರೈತರಿಗೆ ವಿನಿಮಯಗೊಂಡ ಬೀಜವನ್ನು ಬಿತ್ತಲಾಗಿದೆ.

ಆ) ಕಳಪೆ ಗುಣಮಟ್ಟದ ಬೀಜದಿಂದ ನಷ್ಟ ಉಂಟಾಗಿದೆಯೆಂದು ಯಾವುದೇ ದೂರುಗಳು ಸ್ವೀಕೃತವಾಗಿಲ್ಲವಾದ್ದರಿಂದ ಯಾವುದೇ ಪರಿಹಾರ ನೀಡಿರುವುದಿಲ್ಲ.

ಇ) ಬೀಜ ಕಾಯ್ದೆಯಡಿಯಲ್ಲಿ ಬೀಜಗಳ ಮಾದರಿಗಳನ್ನು ಮಾರಾಟ ಮಳಿಗೆಗಳಿಂದ ಪಡೆದು ಬೆಂಗಳೂರಿನಲ್ಲಿರುವ ಬೀಜ ಪರೀಕ್ಷಾ ಪ್ರಯೋಗಾಲಯಕ್ಕೆ ಪರೀಕ್ಷೆಗಾಗಿ ಕಳುಹಿಸಲಾಗುತ್ತಿದೆ. ಇಂತಹ ಬೀಜಗಳು ಕಡಿಮೆ ಗುಣಮಟ್ಟ ಹೊಂದಿರುವುದಾಗಿ ಕಂಡು ಬಂದರೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. 2000-01 ಸಾಲಿನಲ್ಲಿ ವಿವಿಧ ಬೆಳೆಗಳ 50 ಮಾದರಿ ಬೀಜಗಳನ್ನು ಪಡೆದು ಪರೀಕ್ಷಿಸಲಾಗಿ ಕಡಿಮೆ ಗುಣಮಟ್ಟದ ಬೀಜಗಳು ಕಂಡು ಬಂದಿರುವುದಿಲ್ಲ. 2001-02 ಸಾಲಿನಲ್ಲಿ 50 ಮಾದರಿ ಬೀಜಗಳನ್ನು ಪಡೆದು ಪರಿಶೀಲನೆಗಾಗಿ ಕಳುಹಿಸಿದ್ದು ಕಳಪೆ ಬೀಜದ ಬಗ್ಗೆ ಯಾವುದೇ ವರದಿ ಸ್ವೀಕೃತವಾಗಿರುವುದಿಲ್ಲ.

ಈ) ಯಾವುದೇ ಕಳಪೆ ಗುಣಮಟ್ಟದ ಮಾದರಿ ಕಂಡು ಬಂದಿಲ್ಲವಾದ್ದರಿಂದ ಯಾವುದೇ ಮೊಕದ್ದಮ್ಮೆ ದಾಖಲಿಸಿರುವುದಿಲ್ಲ ಮತ್ತು ದಂಡ ವಸೂಲಿ ಮಾಡಿರುವುದಿಲ್ಲ.

ಡಿ.ಸಿ.ಸಿ. ಬ್ಯಾಂಕ್ ಮುಂತಾದ ಸಹಕಾರಿ ಸಂಸ್ಥೆಗಳ ನೌಕರರ ಸೇವಾ ಭದ್ರತೆ

2049(2532)

ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಡಿಸಿಸಿ ಬ್ಯಾಂಕ್ ಮುಂತಾದ ಜಿಲ್ಲಾ ಮಟ್ಟದ ಸಹಕಾರಿ ಸಂಸ್ಥೆಗಳ ನೌಕರರು ಅಲ್ಲಿಯೇ ಕೆಲಸಕ್ಕೆ ಸೇರಿ ಅಲ್ಲಿಯೇ ನಿವೃತ್ತರಾಗಿರುವ ಪ್ರಸಂಗ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಇದರಿಂದಾಗಿ ಸಹಕಾರಿ ಬೆಳವಣಿಗೆ ಕುಂಠಿತಗೊಳ್ಳುವ ಸಂಭವ ಇಲ್ಲವೇ?

3 ಈ ನೌಕರರು ವರ್ಗಾವಣೆ ಭಯ ಇಲ್ಲದೆ ಸ್ವಹಿತಾಸಕ್ತಿ ಬೆಳೆಸಿಕೊಂಡು ಜಿಲ್ಲಾ ಮಟ್ಟದವರೆಗಿನ ಚುನಾವಣೆಗಳಲ್ಲಿ ಪರೋಕ್ಷವಾಗಿ ಭಾಗವಹಿಸುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ?

4. ಈ ಅನಪೇಕ್ಷಣೀಯ ಬೆಳವಣಿಗೆಯನ್ನು ತಪ್ಪಿಸಲು ಈ ನೌಕರರ ವರ್ಗಾವಣೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಹಾಕಿಕೊಂಡಿರುವ ಬೆಳವಣಿಗೆಗಳೇನು? ಯಾವಾಗ ಜಾರಿಗೆ ಬರಲಾಗುವುದು? (ವಿವರ ನೀಡುವುದು).

ಶ್ರೀ ಡಿ.ಕೆ.ಶಿವಕುಮಾರ (ಸಹಕಾರ ಸಚಿವರು):

1. ಬಂದಿದೆ.

2. ಇಲ್ಲ.

3. ಬಂದಿರುವುದಿಲ್ಲ.

4. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಮುಂತಾದ ಜಿಲ್ಲಾ ಮಟ್ಟದ ಸಹಕಾರಿ ಸಂಸ್ಥೆಗಳ ನೌಕರರ ವರ್ಗಾವಣೆಯ ಅಧಿಕಾರ ಸಂಬಂಧಪಟ್ಟ ಆಡಳಿತ ವರ್ಗದ ಅಧೀನಕ್ಕೆ ಒಳಪಟ್ಟಿರುವುದರಿಂದ ಈ ದಿಸೆಯಲ್ಲಿ ಕ್ರಮ ಕೈಗೊಳ್ಳುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಮೈಸೂರು ಜಿಲ್ಲೆಯಲ್ಲಿ ತೋಟಗಾರಿಕಾ ಫಾರಂಗಳ ಕಾರ್ಯನಿರ್ವಹಣೆ

2050(2533)